## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | **268/21** |

| | | |
|---|---|---|
| ಸಾಕ್ಷಿದಾರರ ಹೆಸರು | ಪೂಜಶ್ರೀ | |
| ತಂದೆಯ ಹೆಸರು | ಮಹದೇವಯ್ಯಾ | ಸಾಕ್ಷಿಗೆ ದಿಃ **08.09.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **20** ವರ್ಷ | |
| ಉದ್ಯೋಗ | ನರ್ಸಿಂಗ್ ವಿದ್ಯಾರ್ಥಿನಿ | ಪಿ.ಡಬ್ಲ್ಯೂ **-01** |
| ವಾಸ ಸ್ಥಳ | ಮುಂಗೂರು ಗ್ರಾಮ, ಟಿ.ನರಸೀಪುರ ತಾಲ್ಲೂಕು. | ಸಿ.ಡಬ್ಲ್ಯೂ **-01** |

**ಮುಂದುವರೆದ ಪಾಟೀಸವಾಲು :-ಆರೋಪಿ ಪರ ವಕೀಲರಾದ ಎಮ್.ಎಸ್.ಬಿ ರವರಿಂದಃ-**

ನಮ್ಮ ತಾಯಿ ಮನೆಗೆ ಬಂದಿಲ್ಲ ಎಂದು ನಾನು ಮೊದಲು ಮಹದೇವಸ್ವಾಮಿ ಇವರಿಗೆ ತಿಳಿಸಿರುತ್ತೇನೆ. ಮಹದೇವಸ್ವಾಮಿ ಇವರು ನನಗೆ ಸಾಕು ತಂದೆ ಇರುತ್ತಾರೆ. ಮೊದಲು ನಮ್ಮ ತಾಯಿಯನ್ನು ಹುಡುಕಲು ಮಹದೇವಸ್ವಾಮಿ ಹೋದರು ನಂತರ ನಮ್ಮ ತಮ್ಮ ಮತ್ತು ಮಾವ ನಾಗರಾಜ ಹುಡುಕಲು ಹೋದರು. ನನಗೆ ಸಮಯ ನೆನಪಿಲ್ಲ. ಅವರು ಹುಡುಕಲು ಹೋಗಿ ಎಷ್ಟು ಗಂಟೆಗೆ ಹಿಂತಿರುಗಿ ಬಂದರು ಎಂದು ಸಮಯ ನನಗೆ ನೆನಪಿಲ್ಲ. ನಾನು ನಮ್ಮ ತಾಯಿ ಕಾಣಿಸುತ್ತಿಲ್ಲ ಎಂದು ಅಕ್ಕ-ಪಕ್ಕದವರಿಗೆ ಹೇಳಿರುವುದಿಲ್ಲ, ಸಂಬಂಧಿಕರಿಗೆ ಮಾತ್ರ ಹೇಳಿರುತ್ತೇನೆ. ನಮ್ಮ ತಾಯಿ ವಾಕಿಂಗ್ ಗೆ ಹೋಗಿ ಮನೆಗೆ ಹಿಂತಿರುಗಿ ಬಂದಿದ್ದರು ಎಂದರೆ ಸರಿಯಲ್ಲ. ನಮ್ಮ ತಾಯಿ ಮನೆಗೆ ಬಂದಿದ್ದಾರೆ ಎಂದು ಮಹದೇವಸ್ವಾಮಿ ಫೋನ್ ಮಾಡಿದಾಗ ರಸ್ತೆ ಮೇಲೆ ಹೋಗುವವರ ಗೆಜ್ಜೆ ಶಬ್ದ ಕೇಳಿ ನಮ್ಮ ತಾಯಿ ಮನೆಗೆ ಬಂದಿದ್ದಾರೆ ಎಂದು ಹೇಳಿರುತ್ತೇನೆ. ನಮ್ಮ ತಾಯಿ ಮನೆಗೆ ಬಂದಿದ್ದರೂ ಕೂಡಾ ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>7</u>

ದಿಃ 26.08.2021 ರಂದು ನಾನು ಕಾಲೇಜಿಗೆ ಹೋಗಿರಲಿಲ್ಲ, ನಮ್ಮ ತಾಯಿಯನ್ನು ಹುಡುಕುತ್ತಿದ್ದೆನು. ನಮ್ಮ ತಾಯಿಯ ಶವ ಕಾಲುವೆ ಹತ್ತಿರ ಸಿಕ್ಕಿತು ಎಂದು ನಿಮಗೆ ಯಾರು ಹೇಳಿದ್ದಾರೆ ಎಂದು ಕೇಳಿದ್ದಕ್ಕೆ ಸಾಕ್ಷಿಯು ಅವರ ಕುಟುಂಬದಲ್ಲಿ ಕಲಹ ಉಂಟಾಗುತ್ತದೆ ಎಂದು ಅವರ ಹೆಸರು ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನನಗೆ ಅವರು ಮಧ್ಯಾಹ್ನ ಅಂದಾಜು 3.00 ಗಂಟೆಗೆ ನಮ್ಮ ತಾಯಿಯ ಶವ ಪತ್ತೆ ಆದ ಬಗ್ಗೆ ಹೇಳಿರುತ್ತಾರೆ. ನಮ್ಮ ತಾಯಿಯ ಶವ ಪತ್ತೆಯಾದ ಸ್ಥಳದಿಂದ ನಮ್ಮ ಮನೆಯಿಂದ ಎಷ್ಟು ದೂರ ಇದೆ ಎಂದು ನನಗೆ ಅಳತೆ ಹೇಳಲು ಆಗುವುದಿಲ್ಲ. ಪೊಲೀಸರಿಗೆ ನಮ್ಮ ತಾಯಿಯ ಶವ ಸಿಕ್ಕ ವಿಚಾರ ಮಹದೇವಸ್ವಾಮಿ ತಿಳಿಸಿರುತ್ತಾರೆ, ನಾನು ಪಿರ್ಯಾದಿ ಕೊಟ್ಟಿರುತ್ತೇನೆ. ಪೊಲೀಸರು ನಮ್ಮ ತಾಯಿಯ ಶವ ಸಿಕ್ಕ ಸ್ಥಳಕ್ಕೆ ಸುಮಾರು ಸಾಯಂಕಾಲ 6.00 ಗಂಟೆಗೆ ಬಂದಿರುತ್ತಾರೆ. ಪಿರ್ಯಾದಿ ನನ್ನ ಹಸ್ತಾಕ್ಷರದಲ್ಲಿ ಇರುತ್ತದೆ. ನಾನು ಪೊಲೀಸರಿಗೆ ಪಿರ್ಯಾದಿ ಅಂದಾಜು 6.00 ಗಂಟೆಗೆ ಕೊಟ್ಟಿರುತ್ತೇನೆ. ಆರೋಪಿತನು ನಿಮ್ಮ ತಾಯಿಗೆ ಒಂದು ಗತಿಕಾಣಿಸುತ್ತೇನೆ ಎಂದು ಹೇಳಿದ್ದನು ಎನ್ನುವ ವಿಷಯ ಪಿರ್ಯಾದಿಯಲ್ಲಿ ಬರೆದಿಲ್ಲ ಎಂದರೆ ಸರಿ ಇದೆ. ಸಾಕ್ಷಿ ಮುಂದುವರೆದು ಹೇಳುತ್ತಾರೆ, ನಾನು ನಮ್ಮ ತಾಯಿಯನ್ನು ಕಳೆದುಕೊಂಡ ದುಖಃದಲ್ಲಿ ಇದ್ದೆನು, ಯಾರು ಬೆದರಿಕೆ ಹಾಕಿದ್ದಾರೆ ಎನ್ನುವ ವಿಷಯ ನನಗೆ ನೆನಪಿಗೆ ಬರಲಿಲ್ಲ ಎಂದು ಹೇಳುತ್ತಾರೆ. ಆರೋಪಿತನು ನಿಮ್ಮ ತಾಯಿಗೆ ಒಂದು ಗತಿಕಾಣಿಸುತ್ತೇನೆ ಎಂದು ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಅದಕ್ಕಾಗಿ ನಾನು ಪಿರ್ಯಾದಿಯಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ನಾನು ತಾಯಿ ಕಳೆದುಕೊಂಡ ನೋವಿನಲ್ಲಿದ್ದರಿಂದ ಆ ವಿಷಯ ನಾನು ಬರೆದಿಲ್ಲ ಎಂದು ಹೇಳುತ್ತಾರೆ.

ಆರೋಪಿತನು ಯಾವುದೇ ಕೊಲೆ ಮಾಡದೇ ಇದ್ದರೂ ಕೂಡಾ ನಾನು ಆತನ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದ ಪಂಚನಾಮೆಯ ಸಮಯಕ್ಕೆ ನಾನು, ಶಿವಣ್ಣ, ರಾಜೇಶ್ ಇದ್ದೆವು, ರಾಜೇಶ್ ಮತ್ತು ಶಿವಣ್ಣ ನಮ್ಮ ಗ್ರಾಮದವರು ಇರುತ್ತಾರೆ. ಶವ ಸಿಕ್ಕ ಸ್ಥಳದಿಂದ ಕೃತ್ಯ ನಡೆದ ಸ್ಥಳ ಅಂದಾಜು 110 ಅಡಿ ದೂರ ಇರಬಹುದು. ಎಷ್ಟು ಜನ ಪೊಲೀಸರು ಶವ ಪಂಚನಾಮೆ ಮಾಡುವಾಗ ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ರೋಜಾ ಗಿಡಗಳು ಅಂದಾಜು 7 ರಿಂದ 8 ಅಡಿ

ಎತ್ತರದಲ್ಲಿ ಬೆಳೆದಿದ್ದವು. ಸ್ಥಳದ ಪಂಚನಾಮೆಯ ಕಾಲಕ್ಕೆ ಪೊಲೀಸರು ಎಂ.ಓ-1 ರಿಂದ ಎಂ.ಓ-7 ನ್ನು ವಶಪಡಿಸಿಕೊಂಡಿರುತ್ತಾರೆ. ನಮ್ಮ ತಾಯಿಯು ವಾಕಿಂಗ್ ಗೆ ಹೋಗುವಾಗ ಮಳೆ ಹನಿ ಬರುತ್ತಿತ್ತು. ಆ ದಿನ ಮಳೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಆ ದಿವಸ ಛತ್ರಿ (ಕೊಡೆ) ತೆಗೆದುಕೊಂಡು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕೈಗೆ ಧರಿಸಿದ ಬಳೆಗಳು ಒಡೆದರೆ ಕೈಗೆ ಗಾಯವಾಗುತ್ತದೆ. ಬಳೆಗಳ ಚೂರುಗಳ ಮೇಲೆ ರಕ್ತ ಇಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿಯು ಆ ದಿನ ಮಳೆಯ ತೇವಾಂಶ ಇದ್ದುದ್ದರಿಂದ ರಕ್ತದ ಕಲೆಗಳು ಹೋಗಿರಬಹುದು ಎಂದು ಹೇಳುತ್ತಾರೆ. ಆ ದಿವಸ ಮಳೆ ಬಂದಿತ್ತು ಎಂದು ಹೇಳುತ್ತಾರೆ. ರಕ್ತದ ಕಲೆ ಇರುವ ಮಣ್ಣು, ರೋಜಾ ಗಿಡದ ಪೊದೆಯ ಹತ್ತಿರ ಪೊಲೀಸರು ಶೇಖರಿಸಿರುತ್ತಾರೆ. ನೀರಿನ ಕಾಲುವೆ ಎಷ್ಟು ಅಡಿ ಆಳ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ಎಷ್ಟು ಅಗಲ ಇದೆ ಎಂದು ಕೂಡಾ ಹೇಳಲು ಆಗುವುದಿಲ್ಲ. ಕಾಲುವೆಯಲ್ಲಿ ನೀರು ಹರಿಯುತ್ತಿತ್ತು, ಎಷ್ಟು ಅಡಿ ಆಳದ ನೀರು ಹರಿಯುತ್ತಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ನಮ್ಮ ತಾಯಿಯ ಶವವನ್ನು ನೋಡಿದಾಗ ಶವವು ಸ್ವಲ್ಪ ನೀರಿನಲ್ಲಿ ಇತ್ತು, ಸ್ವಲ್ಪ ದಡದಲ್ಲಿ ಇತ್ತು. ಸ್ಥಳದ ಪಂಚನಾಮೆಯನ್ನು ಪೊಲೀಸರು ಸ್ಥಳದಲ್ಲೆ ಬರೆದಿರುತ್ತಾರೆ. ಪೊಲೀಸರು ಪಂಚನಾಮೆಯನ್ನು ಠಾಣೆಯಲ್ಲಿ ಮಾಡಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು